KACD420002542024

# ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

## ಸಿ.ಸಿ. ನಂಃ 97/2024

ಫಿರ್ಯಾದಿದಾರರು : ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ

**–ವಿರುದ್ಧ–**

ಆರೋಪಿ : ಅಶೋಕ್ ಕುಮಾರ್ ಬಿ.ಎಲ್. ಬಿನ್ ಲೋಕೇಶ್ವರಪ್ಪ ,

**–:: ದೋ ಷಾ ರೋ ಪ ಣೆ ::–**

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿ : ಅಶೋಕ್ ಕುಮಾರ್ ಬಿ.ಎಲ್. ಬಿನ್ ಲೋಕೇಶ್ವರಪ್ಪ ,
ವಯಸ್ಸುಃ 42 ವರ್ಷಗಳು, ವೃತ್ತಿಃ ವ್ಯವಸಾಯ ,
ವಾಸಃ ಬಾಣಗೆರೆ ಗ್ರಾಮ, ಹೊಳಲ್ಕೆರೆ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 01-01-2024 ರಂದು ಸಂಜೆ 7-30 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಬಾಣಗೆರೆ ಗ್ರಾಮದ ಶ್ರೀ ಆನಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಹಾದು ಹೋಗಿರುವ ಹೊಳಲ್ಕೆರೆ-ಚಿಕ್ಕಜಾಜೂರು ಟಾರ್ ರಸ್ತೆಯ ಪಕ್ಕ ಪೂರ್ವಕ್ಕೆ ಕಚ್ಚಾ ಮಣ್ಣಿನ ರಸ್ತೆಯಲ್ಲಿ ಚಾಸಾ-1 ರವರು ನಡೆದುಕೊಂಡು ಹೋಗುತ್ತಿರುವಾಗ , ಆರೋಪಿಯಾದ ನೀನು ಜಮೀನಿನ ಹಂಚಿಕೆಯ ವಿಚಾರವಾಗಿ ವೈಷಮ್ಯವಿಟ್ಟುಕೊಂಡು ಚಾಸಾ-1 ರವರಿಗೆ ಹಾದರಗಿತ್ತಿ, ಬೋಸುಡಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತನಾದ ನೀನು ಭಾ.ದಂ.ಸಂ. ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಆಪಾದಿಸಲಾಗಿರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಜಗಳ ಮಾಡುವ ಉದ್ದೇಶದಿಂದ ಚಾಸಾ-1 ರವರಿಗೆ ನೀನು ನಮ್ಮ ತೋಟದಲ್ಲಿ ಬೋರು ಕೊರೆಸುತ್ತಿರುತ್ತೀಯಾ ಮತ್ತು ಕಾಯಿ ಕೆಡವುತ್ತೀಯಾ ಎಂದು ಕಾಲಿನಿಂದ ಜಾಡಿಸಿ, ಚಾಸಾ-1 ರವರ ಹೊಟ್ಟೆಗೆ ಹೊಡೆದು ಕೆಡವಿ ಕೈ ಕಾಲುಗಳಿಂದ ಚಾಸಾ-1 ರವರ ತಲೆಗೆ , ಮೈ ಕೈ ಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಈ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ. ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡುತ್ತೀರೆಂದು ಆಪಾದಿಸಲಾಗಿರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಜಗಳ ಮಾಡುವ ಉದ್ದೇಶದಿಂದ, ಚಾಸಾ-1 ರವರು ತೊಟ್ಟಿದ್ದ ಸೀರೆಯನ್ನು ಹಿಡಿದು ಎಳೆದಾಡಿ ಚಾಸಾ-1 ರವರ ಮಾನಕ್ಕೆ ದಕ್ಕೆಯನ್ನುಂಟು ಮಾಡಿರುತ್ತೀರಿ.. ಆದ್ದರಿಂದ ಆರೋಪಿತನಾದ ನೀನು ಭಾ.ದಂ.ಸಂ.ಕಲಂ 354 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡುತ್ತೀರೆಂದು ಆಪಾದಿಸಲಾಗಿರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಜಗಳ ಮಾಡುವ ಉದ್ದೇಶದಿಂದ ಚಾಸಾ-1 ರವರಿಗೆ ಈ ದಿನ ಬದುಕಿಕೊಂಡೆ , ಇನ್ನೊಮ್ಮೆ ಜಮೀನಿನ ಒಳಗೆ ಕಾಲು ಇಟ್ಟರೆ ನಿನ್ನ ಪ್ರಾಣ ತೆಗೆಯುತ್ತೇನೆಂದು ಪ್ರಾಣ ಬೆದರಿಕೆ ಹಾಕಿ ಭಯನ್ನುಟ್ಟಿಸಿರುತ್ತೀರಾ. ಆ ಮೂಲಕ ಆರೋಪಿತನಾದ ನೀನು ಭಾ.ದಂ.ಪ್ರ.ಸಂ. ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರತ್ತದೆ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು

ದಿಃ **18**-09-2024 ಜೆ ಎಂ ಎಫ್ ಸಿ, ಹೊಳಲ್ಕೆರೆ.